ಖರೀದಿಸಲಾಗಿದೆ?

ಶ್ರೀ ಆರ್.ಕೃಷ್ಣಪ್ಪ (ವಯಸ್ಕರ ಶಿಕ್ಷಣ ಸಚಿವರು):-

ಅ)05

ಆ)ರೂ.26,500-00

ಇ)ರೂ.3.12 ಲಕ್ಷಗಳು

ಈ)03 ಮೂರಕ್ಕೂ ಅನುಮತಿ ಮತ್ತು ಧನ ಸಹಾಯ ನೀಡಲಾಗಿದೆ.

ಉ)ಇಲ್ಲ. 5475

ವಿಷಯ:- ಪಿ.ಯು.ಸಿ. ದ್ವಿತೀಯ ವರ್ಷದ ''ಕರ್ನಾಟಕ ಇತಿಹಾಸ'' ಪುಸ್ತಕದ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 111 (467)

ಶ್ರೀ ಆಶೋಕ ಕಾಟವೇ (ಹುಬ್ಬಳ್ಳಿ):- ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

1. ರಾಜ್ಯದಲ್ಲಿ ಪಿ.ಯು.ಸಿ.ದ್ವಿತೀಯ ವರ್ಷದ ಪಠ್ಯಪುಸ್ತಕವಾಗಿ ''ಕರ್ನಾಟಕ ಇತಿಸಾಸ'' ಅಳವಡಿಸಿದ್ದು ಪ್ರಸಕ್ತ ವರ್ಷಕ್ಕೆ ''ಭಾರತದ ಇತಿಹಾಸ'' ಎಂದು ಬದಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2. ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು?

3. ಹಳೆಯ ಪಠ್ಯ ಪುಸ್ತಕವನ್ನೇ ಮುಂದುವರೆಸಲು ಇರುವ ತೊಂದರೆಗಳೇನು?

ಶ್ರೀ ಹೆಚ್.ಜಿ.ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು):-

1) ಬಂದಿದೆ

2) ಪಠ್ಯಸೂಚಿ ರಚನಾ ಮಂಡಳಿಯ ತೀರ್ಮಾನದಂತೆ ಈ ಬದಲಾವಣೆ ಆಗಿದೆ.

3) 1996-97 ಮತ್ತು 1997-98ನೇ ಸಾಲಿಗೆ ಹಳೆ ಪಠ್ಯಪುಸ್ತಕವನ್ನೇ ಮುಂದುವರಿಸಲು ಸರ್ಕಾರ ನಿರ್ಧಾರ ತೆಗೆದುಕೊಂಡಿದೆ. ಈ ಪಠ್ಯವನ್ನು ಮುಂದುವರಿಸುವ ಅಥವಾ ಬದಲಾಯಿಸುವ ಬಗ್ಗೆ ತಜ್ಞರ ಸಮಿತಿಯೊಂದನ್ನು ರಚಿಸಿ ಅದರ ವರದಿ ಬಂದ ನಂತರ ಈ ಬಗ್ಗೆ ಪರಿಶೀಲಿಸಿ ಸೂಕ್ತ ನಿರ್ಧಾರ ತೆಗೆದುಕೊಳ್ಳಲಾಗುವುದು.

ವಿಷಯ:- ವಿಜಾಪುರ ಜಿಲ್ಲೆಯಲ್ಲಿರುವ ಸರ್ಕಾರಿ ಕಿರಿಯ ಕಾಲೇಜುಗಳಲ್ಲಿ ಖಾಲಿ ಇರತಕ್ಕ ಹುದ್ದೆಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 113 (44)